ರಾಜ್ಯದಲ್ಲಿರುವ ಆರೋಗ್ಯ ಸಹಾಯಕರಿಗೆ ವೇತನ ಹೆಚ್ಚಳ.

1856(2036)

ಶ್ರೀ ಪೂಜಾರ್ ಪಿ.ಎಚ್.(ಬಾಗಲಕೋಟೆ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿರುವ ಒಟ್ಟು ಆರೋಗ್ಯ ಸಹಾಯಕರುಗಳ ಸಂಖ್ಯೆ ಎಷ್ಟು; ಇವರುಗಳಿಗೆ ನೀಡಲಾಗುತ್ತಿರುವ ಮಾಸಿಕ ವೇತನ ಎಷ್ಟು?

ಆ. ರಾಜ್ಯದಲ್ಲಿ ಎಷ್ಟು ಆರೋಗ್ಯ ಸಹಾಯಕರುಗಳ ಹುದ್ದೆ ಖಾಲಿ ಇದೆ; ಇವುಗಳನ್ನು ಯಾವಗ ಭರ್ತಿ ಮಾಡಲಾಗುವುದು?

ಇ. ಈಗ ಆರೋಗ್ಯ ಸಹಾಯಕರುಗಳಿಗೆ ನೀಡುತ್ತಿರುವ ಮಾಸಿಕ ವೇತನವನ್ನು ಹೆಚ್ಚಳ ಮಾಡುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ? ಇದ್ದಲ್ಲಿ ಹೆಚ್ಚಳದ ಪ್ರಮಾಣ ಎಷ್ಟು; ಈ ಹೆಚ್ಚಳ ಎಂದಿನಿಂದ ಜಾರಿಗೆ ಬರಲಿದೆ?

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ. ಒಟ್ಟು ಆರೋಗ್ಯ ಸಹಾಯಕರ ಸಂಖ್ಯೆ: 5,854. ಮಾಸಿಕ ವೇತನ ಸುಮಾರು ರೂ.2,83,56,776-00 (ಮನೆ ಬಾಡಿಗೆ ಮತ್ತು ನಗರ ಪರಿಹಾರ ಭತ್ಯೆ ಬಿಟ್ಟು)

ಆ. 2,538 ಹುದ್ದೆಗಳು, ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಇ. ಇಲ್ಲ

ರಾಜ್ಯದ ಮಾಧ್ಯಮಿಕ ಶಾಲೆಗಳಲ್ಲಿ ಪೂರಕ ಪಠ್ಯಕ್ರಮಗಳು.

1857(2426)

ಶ್ರೀ ಡಿ.ಆರ್.ಪಾಟೀಲ್(ಗದಗ್): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ. ರಾಜ್ಯದ ಮಾಧ್ಯಮಿಕ ಶಾಲೆಗಳಲ್ಲಿ ಪೂರಕ ಪಠ್ಯದ ಬದಲು ಕಲಿಸಲು ಹಲವು ವರ್ಷಗಳ ಹಿಂದೆ ಸೂಚಿಸಿದ 10 ವಿಷಯಗಳು 8, 9 ಹಾಗೂ 10ನೇ ವರ್ಗಕ್ಕೆ